Phone: 91- 080-23330984/149
Telefax: 91- 080-23330984

Website :www.uasbangalore.edu.in
Email : registrar@uasbangalore.edu.in

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕುಲಸಚಿವರ ಕಛೇರಿ, ನಾಯಕ್ ಭವನ, ಗಾಕೃವಿಕೆ, ಬೆಂಗಳೂರು

**UNIVERSITY OF AGRICULTURAL SCIENCES, BANGALORE**

**Office of the Registrar, GKVK, Bangalore-560065**

ಸಂಖ್ಯೆ:ಕುಸ/ಸಕುಸ/ಅಧೀಕ್ಷಕರು/ಐಸಿಎಆರ್/2022–23 ದಿನಾಂಕ: 09.02.2023

## ಅಧಿಸೂಚನೆ

ವಿಷಯ: ರಾಜ್ಯದ ವಿವಿಧ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ಸ್ನಾತಕ ಪದವಿಗಳಿಗೆ ಐ.ಸಿ.ಎ.ಆರ್ ಕೋಟಾದಡಿ (AIEEA-UG-2022-23, ICAR, New Delhi) ಭರ್ತಿಯಾಗದೇ ಉಳಿದಿರುವ ಸೀಟುಗಳಿಗೆ ದಿನಾಂಕ: 14.02.2023 ರಂದು ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆ ನಡೆಸುವ ಕುರಿತು.

ಉಲ್ಲೇಖ: 1. ರಾಜ್ಯದ ಎಲ್ಲಾ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಸ್ನಾತಕ ಪದವಿಗಳ ಸಮಿತಿ ಸಭೆಯ ನಡಾವಳಿಗಳ ದಿನಾಂಕ: 06.02.2023
2. ಶಿಕ್ಷಣ ನಿರ್ದೇಶಕರು, ಕೃವಿವಿ, ಬೆಂಗಳೂರುರವರ ಶಿಫಾರಸ್ಸಿನ ದಿನಾಂಕ: 09.02.2023
3. ಕುಲಪತಿಗಳು, ಕೃವಿವಿ, ಬೆಂಗಳೂರುರವರ ಅನುಮೋದನೆಯ ದಿನಾಂಕ: 09.02.2023

***

ಶೈಕ್ಷಣಿಕ ವರ್ಷ 2022–23ನೇ ಸಾಲಿನ ಪ್ರಥಮ ವರ್ಷದ ಸ್ನಾತಕ ಪದವಿಗಳಿಗೆ **ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ, ರಾಯಚೂರು ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬಾಗಲಕೋಟೆ,** ಈ ವಿಶ್ವ ವಿದ್ಯಾನಿಲಯಗಳಲ್ಲಿ ವಿವಿಧ ಸ್ನಾತಕ ಪದವಿಗಳಿಗೆ ಐ.ಸಿ.ಎ.ಆರ್ (AIEEA-UG-2022-23 ICAR) ಎ.ಐ.ಇ.ಇ.ಎ–ಯುಜಿ ಅಡಿಯಲ್ಲಿ ನಡೆಸಿದ ಪರೀಕ್ಷೆ ಪ್ರಕಾರ ಭರ್ತಿಯಾಗದೆ ಉಳಿದಿರುವ ಪ್ರವರ್ಗವಾರು ಸೀಟುಗಳನ್ನು ದಿನಾಂಕ **14.02.2023** ರಂದು **ಮುಕ್ತ ಕೌನ್ಸಲಿಂಗ್ ಆಯ್ಕೆ ಪ್ರಕ್ರಿಯೆ ಮೂಲಕ ಭರ್ತಿ ಮಾಡಲಾಗುವುದು.**

ಈ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಆಸಕ್ತ ಅಭ್ಯರ್ಥಿಗಳು ಈ ಅಧಿಸೂಚನೆಯೊಂದಿಗೆ ಎಲ್ಲಾ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಅಧಿಕೃತ ಅಂತರ್ಜಾಲ www.uasbangalore.edu.in, www.uasd.edu.in, www.uasraichur.edu.in ಹಾಗೂ www.uahsbagalkot.edu.in, ಇದರಲ್ಲಿರುವ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು **ಭರ್ತಿ ಮಾಡಿದ ಅರ್ಜಿಯೊಂದಿಗೆ ಸಂಬಂಧಪಟ್ಟ ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಗಳನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಡೀಕರಿಸಿ ದಿನಾಂಕ: 10.02.2023 ರಿಂದ 13.02.2023 ಮಧ್ಯಾಹ್ನ 2.00 ಗಂಟೆಯೊಳಗೆ ಖುದ್ದಾಗಿ ಕುಲಸಚಿವರು, ಕೃವಿವಿ, ಬೆಂಗಳೂರು ಇವರಿಗೆ ಸಲ್ಲಿಸಿ ನೊಂದಾಯಿಸಿಕೊಳ್ಳಬೇಕು. ಕೊನೆಯ ದಿನಾಂಕದ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.**

- ಈ ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯನ್ನು ದಿನಾಂಕ: **14.02.2023** ರಂದು ಕುವೆಂಪು ಸಭಾಂಗಣ, ಕೃವಿವಿ, ಜಿಕೆವಿಕೆ, ಬೆಂಗಳೂರು ಇಲ್ಲಿ ಬೆಳಿಗ್ಗೆ **11.00** ಗಂಟೆಗೆ ನಡೆಸಲಾಗುವುದು. (ಪಶು ಸಂಗೋಪನೆ ಮತ್ತು ಮೀನುಗಾರಿಕೆ ವಿಶ್ವವಿದ್ಯಾನಿಲಯ, ಬೀದರ್ ಮತ್ತು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಶಿವಮೊಗ್ಗ ಹೊರತು ಪಡಿಸಿ)

ಎಲ್ಲಾ ಕೃಷಿ ಹಾಗೂ ತೋಟಗಾರಿಕೆ ವಿಶ್ವವಿದ್ಯಾನಿಲಯಗಳಲ್ಲಿ ಲಭ್ಯವಿರುವ ಸೀಟುಗಳಿಗೆ, ಮುಕ್ತ ಕೌನ್ಸಲಿಂಗ್ ಆಯ್ಕೆ ಪ್ರಕ್ರಿಯೆಯನ್ನು ಒಂದೇ ಸ್ಥಳದಲ್ಲಿ ಅಂದರೆ ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು ಇಲ್ಲಿಯೇ ನಡೆಸಲಾಗುವುದು.

ಪು.ತಿ.ನೋ

ಕರ್ನಾಟಕ ರಾಜ್ಯದ ಸ್ನಾತಕ ಪದವಿಗಳಿಗೆ ನಡೆಸಿದ **AIEEA-UG-2022-23** ಪರೀಕ್ಷೆಗಳನ್ನು ಬರೆದು ರ್‍ಯಾಂಕ್ ಪಡೆದ ಅಭ್ಯರ್ಥಿಗಳು ಮುಕ್ತ ಕೌನ್ಸಲಿಂಗ್‌ಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಮತ್ತು ಈ ಕೆಳಕಂಡ ಷರತ್ತುಗಳೊಂದಿಗೆ ಒಳಪಟ್ಟಿರುತ್ತಾರೆ:

1. ಈ ಮೇಲಿನ ಪರೀಕ್ಷೆಯನ್ನು ಬರೆದು ರ್‍ಯಾಂಕ್ ಗಳಿಸಿದ ಕರ್ನಾಟಕ ರಾಜ್ಯದ ಅಭ್ಯರ್ಥಿಗಳಿಗೆ ಮಾತ್ರ ಮುಕ್ತ ಕೌನ್ಸಲಿಂಗ್‌ನಲ್ಲಿ ಭಾಗವಹಿಸಲು ಅವಕಾಶ ಇರುತ್ತದೆ (ಸ್ಥಳೀಯ ಅಭ್ಯರ್ಥಿಯೆನ್ನುವ ಪ್ರಮಾಣ ಪತ್ರ ಲಗತ್ತಿಸಬೇಕು).
2. **ICAR** ಕೋಟಾದಡಿ ಭಾಗವಹಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ **AIEEA-UG-2022–23** ಪರೀಕ್ಷೆ ಬರೆದಿದ್ದು **ICAR** ನೀಡಿದ ರ್‍ಯಾಂಕ್ ಪಟ್ಟಿ ಹಾಗೂ ರಿಜಿಸ್ಟ್ರೇಷನ್‌ಗೆ ಅರ್ಹರಾಗಿರುವ ಪ್ರತಿಯನ್ನು ಕಡ್ಡಾಯವಾಗಿ ಅರ್ಜಿಯ ಜೊತೆ ಲಗತ್ತಿಸಬೇಕು. ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿಯ ಅಂಕ ಪಟ್ಟಿಯ ಪ್ರತಿಗಳನ್ನು ಕಡ್ಡಾಯವಾಗಿ ಅರ್ಜಿಯ ಜೊತೆ ಲಗತ್ತಿಸಬೇಕು. **ಮತ್ತು ಈ ಮೇಲೆ ಸೂಚಿಸಿದ ದಾಖಲಾತಿಗಳ ಜೆರಾಕ್ಸ್ ಪ್ರತಿಗಳನ್ನು ಅರ್ಜಿಯ ಜೊತೆ ಲಗತ್ತಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ಅಪೂರ್ಣ ಎಂದು ತಿರಸ್ಕರಿಸಲಾಗುವುದು.**
3. ಐಸಿಎಆರ್ ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛಿಸುವ ಅಭ್ಯರ್ಥಿಗಳು ಸ್ನಾತಕ ಪದವಿಗಳಿಗೆ ನಿಗದಿಗೊಳಿಸಲಾಗಿರುವ ಶೈಕ್ಷಣಿಕ ಅರ್ಹತೆ ಮತ್ತು ಮೀಸಲಾತಿ ಬಯಸುವ ಎಲ್ಲಾ ದಾಖಲಾತಿಗಳನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಲಗತ್ತಿಸುವುದು.
4. ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ಪ್ರಕಟಿಸಿರುವ ಪ್ರವರ್ಗದಡಿಗಳಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಸೀಟುಗಳನ್ನು ನಿಯಮಾನುಸಾರ ಸಾಮಾನ್ಯ ವರ್ಗಕ್ಕೆ ಪರಿವರ್ತಿಸಲಾಗುವುದು.
5. ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳು ಮಾಡಿಕೊಳ್ಳುವ ಪ್ರಥಮ ಸೀಟು ಆಯ್ಕೆಯೇ ಅಂತಿಮವಾಗಿರುತ್ತದೆ.
6. ಈ ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ **ICAR** ಕೋಟಾದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳು **NTS Scholarship** ಪಡೆಯಲು ಅರ್ಹರಾಗಿರುವುದಿಲ್ಲ.
7. ಈಗಾಗಲೇ **ICAR AIEEA-UG- 2022-23** ಮತ್ತು **KCET-2022-23**ರ ಪ್ರವೇಶಾತಿ ಪ್ರಕ್ರಿಯೆಯಿಂದ ಆಯ್ಕೆಯಾಗಿ, ರಾಜ್ಯದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳಲ್ಲಿ ಯಾವುದೇ ಪದವಿಗಳಿಗೆ ಪ್ರವೇಶ ಪಡೆದಿರುವ ಅಭ್ಯರ್ಥಿಗಳು ಈ ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅರ್ಹತೆ ಹೊಂದಿರುವುದಿಲ್ಲ.
8. ಈ ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ **ICAR AIEEA-UG**ಯಲ್ಲಿ ದಾಖಲಾತಿಗಳನ್ನು ಪರಿಶೀಲಿಸಿ ನಮೂದಿಸಿರುವ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ತರಬೇಕಾಗಿರುತ್ತದೆ, ಇಲ್ಲವಾದಲ್ಲಿ ಅಭ್ಯರ್ಥಿಗಳು ಮುಕ್ತ ಕೌನ್ಸಲಿಂಗ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ.
9. ಸದರಿ ಪ್ರಕ್ರಿಯೆಯಲ್ಲಿ ಆಯ್ಕೆಯಾಗುವ ಅಭ್ಯರ್ಥಿಗಳು ರೂ. 29,310/– ಪ್ರವೇಶ ಶುಲ್ಕವನ್ನು ನಗದಾಗಿ ಸ್ಥಳದಲ್ಲಿಯೇ ಕಡ್ಡಾಯವಾಗಿ ಪಾವತಿಸಬೇಕಾಗಿರುತ್ತದೆ (ಇತರೆ ಶುಲ್ಕಗಳನ್ನು ಆಯಾ ಕೃವಿವಿಗಳ ಸೂಚನೆಯಂತೆ ಅಭ್ಯರ್ಥಿಗಳು ಪಾವತಿಸತಕ್ಕದ್ದು) ಇಲ್ಲವಾದಲ್ಲಿ ಅಭ್ಯರ್ಥಿಗಳ ಸೀಟನ್ನು ರದ್ದುಗೊಳಿಸಲಾಗುವುದು.
10. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ.10.00 ಲಕ್ಷಕ್ಕಿಂತ ಹೆಚ್ಚಿದ್ದಲ್ಲಿ ಸಾಮಾನ್ಯ ಅಭ್ಯರ್ಥಿಗಳಂತೆ ಪೂರ್ಣ ಶುಲ್ಕವನ್ನು ಪಾವತಿಸಬೇಕಾಗುತ್ತದೆ.

ಪು.ತಿ.ನೋ

11. ಮುಕ್ತ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ.

ಆಯ್ಕೆಯಾದ ಅಭ್ಯರ್ಥಿಗಳು ಆಯಾ ವಿಶ್ವ ವಿದ್ಯಾನಿಲಯ/ ಕಾಲೇಜುಗಳಿಗೆ ದಿನಾಂಕ **15.02.2023** ರ ಸಾಯಂಕಾಲ **4.00** ಘಂಟೆಯೊಳಗೆ ಕಡ್ಡಾಯವಾಗಿ ಪ್ರವೇಶಾತಿ ಪಡೆಯಬೇಕು, ಇಲ್ಲದಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಪ್ರವೇಶಾತಿಯು ರದ್ದಾಗುತ್ತದೆ.

ಕುಲಸಚಿವರು
ಕೃವಿವಿ, ಬೆಂಗಳೂರು
(ರಾಜ್ಯದ ಎಲ್ಲಾ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾನಿಲಯಗಳ ಪರವಾಗಿ)

**ಕುಲಸಚಿವರು**
**ಕೃಷಿ ವಿಶ್ವವಿದ್ಯಾನಿಲಯ**
**ಗಾ.ಕೃ.ವಿ.ಕೇ, ಬೆಂಗಳೂರು-560 065.**

**APPLICATION FOR LEFT OVER SEATS FOR VARIOUS UNDER-GRADUATE DEGREE(UG) PROGRAMMES UNDER ICAR COUNSELING – 2022-23**

**(ONLY FOR KARNATAKA STATE CANDIDATES)**

**(UAS, BANGALORE / UHS BAGALKOT / UAS, DHARWAD & UAS, RAICHUR)**

Affix your recent passport size photo

<table>
<tr><td>1</td><td>Applicant's full Name (in capitals)</td><td colspan="3"></td></tr>
<tr><td>2</td><td>Date of Birth</td><td colspan="3"></td></tr>
<tr><td>3</td><td>Gender</td><td colspan="3"></td></tr>
<tr><td>4</td><td>Category which the candidate belongs</td><td colspan="3"></td></tr>
<tr><td>5</td><td>Name of the Father</td><td colspan="3"></td></tr>
<tr><td>6</td><td>Name of the Mother</td><td colspan="3"></td></tr>
<tr><td>7</td><td>Address for correspondence</td><td colspan="3"></td></tr>
<tr><td>8</td><td>Phone Number</td><td colspan="3">Landline: Mobile:</td></tr>
<tr><td>9</td><td>Nationality</td><td colspan="3"></td></tr>
<tr><td>10</td><td>Mother Tongue</td><td colspan="3"></td></tr>
<tr><td rowspan="10">11</td><td rowspan="10">Degree programme to which you seek admission (in the order of preference)</td><td>Name of the University</td><td>College</td><td>Degree Programme</td></tr>
<tr><td></td><td></td><td></td></tr>
<tr><td></td><td></td><td></td></tr>
<tr><td></td><td></td><td></td></tr>
<tr><td></td><td></td><td></td></tr>
<tr><td></td><td></td><td></td></tr>
<tr><td></td><td></td><td></td></tr>
<tr><td></td><td></td><td></td></tr>
<tr><td></td><td></td><td></td></tr>
<tr><td></td><td></td><td></td></tr>
</table>

p.t.o

| | | | | |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| 12 | AIEEA-UG-2022 Rank (ICAR) | **Application No:** | General: | Category Rank : |

The information furnished above is true to the best of my knowledge / belief.

**Place:**
**Date:** **Signature of the Applicant**

## Note:

1. Only Karnataka candidates are eligible to apply Under ICAR Quota.
2. Those candidates who have been already allocated seats and taken admission in any of the course in the Farm Universities / Engineering / Medical (NEET) courses of Karnataka are not eligible for this open counseling process.
3. **AIEEA:** SSLC, PUC / $12^{th}$ marks card, rank Card of AIEEA-UG-2022 ranking & eligible for registration copy, category and income certificate copies, $1^{std}$ to $12^{th}$ study and submit attested copies of these documents.
4. Candidate should bring original documents and prescribed fees at time of counseling otherwise they will not be allowed for counseling process.